# ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4 (1) (ಬಿ)ರ ಪ್ರಕಾರ 2018–19ನೇ (31–03–2019) ಸಾಲಿನ ಮಾಹಿತಿ

********

## ಉಪನಿರ್ದೇಶಕರ ಕಛೇರಿ, ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬಾಗಲಕೋಟೆ.

ಉಪ ನಿರ್ದೇಶಕರು,
ಆ.ನಾ.ಸ.ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟ

ಕರ್ನಾಟಕ ಸರಕಾರ

ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಉಪನಿರ್ದೇಶಕರ ಕಾರ್ಯಾಲಯ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಬಾಗಲಕೋಟೆ ಜಿಲ್ಲೆ.

ಸಂ:ಆನಾಸ:ಸಿಬ್ಬಂದಿ:ಮಾಹಅ:01/2018-19

ದಿನಾಂಕ:30-04-2019

**ಸಾರ್ವಜನಿಕ ಮಾಹಿತಿ ಪ್ರಕಟಣೆ**
**2018-19ನೇ ಸಾಲಿನ ಮಾಹಿತಿ**
**(31.03.2019)**

:: ಅಧಿಸೂಚನೆ::

ವಿಷಯ:-ಭಾರತ ಸರ್ಕಾರದ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2005ರ ಪ್ರಕರಣ ಕಲಂ 4)(1)(ಬಿ)ಅನುಸಾರ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸಂಬಂಧಿಸಿದಂತೆ ಕಛೇರಿಯ ಮಾಹಿತಿಯನ್ನು ಪ್ರಕಟಿಸುವ ಬಗ್ಗೆ. (2018-19)

******

ಭಾರತ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಮಾಹಿತಿ ಹಕ್ಕು ಅಧಿನಿಯಮ 2005 (Central Act 22 of 2005) ಸೆಕ್ಷನ್ 5 (1), 5(2) ಮತ್ತು 19(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಸೇರಿದ ಬಾಗಲಕೋಟೆ ಉಪನಿರ್ದೇಶಕರ ಕಛೇರಿಯ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ "ಸಾರ್ವಜನಿಕ ಮಾಹಿತಿ ಅಧಿಕಾರಿ" ಮತ್ತು "ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ" ಹಾಗೂ "ಮೇಲ್ಮನವಿ ಪ್ರಾಧಿಕಾರಿ" ಗಳನ್ನಾಗಿ ಈ ಕೆಳಕಂಡಂತೆ ಸರ್ಕಾರದಿಂದ ನೇಮಿಸಲಾಗಿದೆ. (ಮಾನ್ಯ ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರುರವರ ಅಧಿಸೂಚನೆ ಸಂ:ಸಿಎಫ್ಎಸ್:ಇಎಸ್ಟಿ(1)62:2005-06 ದಿನಾಂಕ:12-09-2005)

| ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 5(1) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 5(2) ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಅಧಿಕಾರಿ |
|---|---|---|
| ಉಪನಿರ್ದೇಶಕರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬಾಗಲಕೋಟೆ | ಸಹಾಯಕ ನಿರ್ದೇಶಕರು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬಾಗಲಕೋಟೆ | ಜಿಲ್ಲಾಧಿಕಾರಿಗಳು ಬಾಗಲಕೋಟೆ ಜಿಲ್ಲೆ ಬಾಗಲಕೋಟೆ |



ಉಪ ನಿರ್ದೇಶಕರು,
ಆ.ನಾ.ಸ. ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟೆ

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆಯ ಕಲಂ 4(1)ರಡಿ ಒಟ್ಟು 19 ವಿವಿಧ ಅಂಶಗಳನ್ನೊಳಗೊಂಡ ಒಂದು ಕೈಪಿಡಿ ತಯಾರಿಸಬೇಕಾಗಿದ್ದು, ಈ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಘಟಕಗಳ ಕಾರ್ಯಚಟುವಟಿಕೆಗಳ 2018–19ನೇ ಸಾಲಿನ ಮಾಹಿತಿ ಈ ಕೆಳಕಂಡಂತಿರುತ್ತದೆ.

**ಕರ್ನಾಟಕ ಸರಕಾರ**

**ಸಾರ್ವಜನಿಕ ಮಾಹಿತಿ ಅಧಿಕಾರಿಗಳು ಹಾಗೂ ಉಪನಿರ್ದೇಶಕರ ಕಾರ್ಯಾಲಯ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ, ಬಾಗಲಕೋಟೆ ಜಿಲ್ಲೆ.**

**ವರ್ಷ:2018–19 (ಏಪ್ರೀಲ್–2018 ರಿಂದ ಮಾರ್ಚ್–2019ರವರಗೆ)**

**ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 4(1) (ಬಿ) ಅಡಿಯಲ್ಲಿ ಮಾಹಿತಿ ಪ್ರಕಟಣೆ**

**I**

4(1) ಬಿ **I** ಇಲಾಖೆಯ ರಚನೆ, ಪ್ರಕಾರ್ಯಗಳು ಮತ್ತು ಕರ್ತವ್ಯಗಳ ವಿವರಗಳು.

1. ಜಿಲ್ಲಾಧಿಕಾರಿಗಳ ಕಾರ್ಯಾಲಯ ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ.
2. ಉಪನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ , ಬಾಗಲಕೋಟೆ ಜಿಲ್ಲೆ

ಉಪನಿರ್ದೇಶಕರು
ಸಹಾಯಕ ನಿರ್ದೇಶಕರು
ವ್ಯವಸ್ಥಾಪಕರು
ಲೆಕ್ಕ ಪತ್ರ ಅಧೀಕ್ಷಕರು
ಪ್ರ.ದ.ಸ–2
ಪ್ರ.ದ.ಲೆ.ಸ–1
ದ್ವಿ.ದ.ಸ–1
ಬೆರಳಚ್ಚುಗಾರರು–1
ವಾಹನಚಾಲಕ–1
ಗ್ರೂಪ್ ಡಿ–2

3. **ಉಪನಿರ್ದೇಶಕರ ಕಚೇರಿಗೆ ಒಳಪಡುವ ಇತರೆ ಕಚೇರಿಗಳ ವಿವರ**
   1) ತಾಲೂಕ ಕಚೇರಿ (ಆಹಾರ ವಿಭಾಗ) ಬಾಗಲಕೋಟೆ
      ಆಹಾರ ಶಿರಸ್ತೇದಾರ್ (1) ಆಹಾರ ನಿರೀಕ್ಷಕರು (3) ಪ್ರದಸ (1) ದ್ವಿದಸ (1) ಗ್ರೂಪ್ ಡಿ (1)
   2) ತಾಲೂಕ ಕಚೇರಿ (ಆಹಾರ ವಿಭಾಗ) ಬದಾಮಿ
      ಆಹಾರ ಶಿರಸ್ತೇದಾರ್ (1) ಆಹಾರ ನಿರೀಕ್ಷಕರು (2) ದ್ವಿದಸ (1)



ಉಪ ನಿರ್ದೇಶಕರು,
ಆ.ನಾ.ಸ.ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟ

3) ತಾಲೂಕ ಕಚೇರಿ (ಆಹಾರ ವಿಭಾಗ) ಗುಳೇದಗುಡ್ಡ
ಆಹಾರ ನಿರೀಕ್ಷಕರು (1)

4) ತಾಲೂಕ ಕಚೇರಿ (ಆಹಾರ ವಿಭಾಗ) ಹುನಗುಂದ
ಆಹಾರ ಶಿರಸ್ತೇದಾರ್ (1) ಆಹಾರ ನಿರೀಕ್ಷಕರು (2) ದ್ವಿದಸ (1)

5) ತಾಲೂಕ ಕಚೇರಿ (ಆಹಾರ ವಿಭಾಗ) ಇಲಕಲ್
ಆಹಾರ ನಿರೀಕ್ಷಕರು (1)

6) ತಾಲೂಕ ಕಚೇರಿ (ಆಹಾರ ವಿಭಾಗ) ಜಮಖಂಡಿ
ಆಹಾರ ಶಿರಸ್ತೇದಾರ್ (1) ಆಹಾರ ನಿರೀಕ್ಷಕರು (2) ದ್ವಿದಸ (1)

7) ತಾಲೂಕ ಕಚೇರಿ (ಆಹಾರ ವಿಭಾಗ) ರಬಕವಿ-ಬನಹಟ್ಟಿ
ಆಹಾರ ನಿರೀಕ್ಷಕರು (1)

8) ತಾಲೂಕ ಕಚೇರಿ (ಆಹಾರ ವಿಭಾಗ) ಮುಧೋಳ
ಆಹಾರ ಶಿರಸ್ತೇದಾರ್ (1) ಆಹಾರ ನಿರೀಕ್ಷಕರು (2) ದ್ವಿದಸ (1)

9) ತಾಲೂಕ ಕಚೇರಿ (ಆಹಾರ ವಿಭಾಗ) ಬೀಳಗಿ
ಆಹಾರ ಶಿರಸ್ತೇದಾರ್ (1) ಆಹಾರ ನಿರೀಕ್ಷಕರು (2) ದ್ವಿದಸ (1)

4. **ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸಗಟು ಪಡಿತರ ಆಹಾರಧಾನ್ಯ, ದಾಸೋಹ, ಮಧ್ಯಾಹ್ನ ಉಪಹಾರ ಯೋಜನೆಯಡಿ ಭಾರತ ಆಹಾರ ನಿಗಮದಿಂದ ದಾಸ್ತಾನು ಎತ್ತುವಳಿ ಮಾಡಿ ನ್ಯಾಯಬೆಲೆ ಅಂಗಡಿಗಳಿಗೆ ಹಾಗೂ ಶಾಲೆಗಳಿಗೆ ಸರಬರಾಜು ಮಾಡುವ ಗೋದಾಮುಗಳ ವಿವರ.**

| ಅ. ನಂ | ತಾಲೂಕು | ನ್ಯಾಯಬೆಲೆ ಅಂಗಡಿಗಳಿಗೆ ಆಹಾರಧಾನ್ಯ ಸರಬರಾಜು ಮಾಡುವ ಸಗಟು ಕೇಂದ್ರದ ಹೆಸರು | ಮಧ್ಯಾಹ್ನ ಉಪಹಾರ ಯೋಜನೆಯ ಆಹಾರಧಾನ್ಯ ಸರಬರಾಜು ಮಾಡುವ ಸಗಟು ಕೇಂದ್ರದ ಹೆಸರು |
|---|---|---|---|
| 1 | ಬಾಗಲಕೋಟೆ | ಕೆಎಫ್‌ಸಿಎಸ್‌ಸಿ ಬಾಗಲಕೋಟೆ | ಕೆಎಫ್‌ಸಿಎಸ್‌ಸಿ ಬಾಗಲಕೋಟೆ |
| 2 | ಬದಾಮಿ | ಕೆಎಫ್‌ಸಿಎಸ್‌ಸಿ ಬದಾಮಿ | ಕೆಎಫ್‌ಸಿಎಸ್‌ಸಿ ಬದಾಮಿ |
| 3 | ಗುಳೇದಗುಡ್ಡ | ಕೆಎಫ್‌ಸಿಎಸ್‌ಸಿ ಗುಳೇದಗುಡ್ಡ | ಕೆಎಫ್‌ಸಿಎಸ್‌ಸಿ ಗುಳೇದಗುಡ್ಡ |
| 4 | ಹುನಗುಂದ | ಕೆಎಫ್‌ಸಿಎಸ್‌ಸಿ ಹುನಗುಂದ | ಕೆಎಫ್‌ಸಿಎಸ್‌ಸಿ ಹುನಗುಂದ |
| 5 | ಇಲಕಲ್ಲ | ಕೆಎಫ್‌ಸಿಎಸ್‌ಸಿ ಇಲಕಲ್ಲ | ಕೆಎಫ್‌ಸಿಎಸ್‌ಸಿ ಇಲಕಲ್ಲ |
| 6 | ಜಮಖಂಡಿ | ಟಿಎಪಿಸಿಎಂಎಸ್ ಜಮಖಂಡಿ | ಕೆಎಫ್‌ಸಿಎಸ್‌ಸಿ ಜಮಖಂಡಿ |
| 7 | ರಬಕವಿ-ಬನಹಟ್ಟಿ | ಕೆಎಫ್‌ಸಿಎಸ್‌ಸಿ ರಬಕವಿ-ಬನಹಟ್ಟಿ | |
| 8 | ಮುಧೋಳ | ಕೆಎಫ್‌ಸಿಎಸ್‌ಸಿ ಮುಧೋಳ<br>ಟಿಎಪಿಸಿಎಂಎಸ್ ಮುಧೋಳ | ಕೆಎಫ್‌ಸಿಎಸ್‌ಸಿ ಮುಧೋಳ |
| 9 | ಬೀಳಗಿ | ಟಿಎಪಿಸಿಎಂಎಸ್ ಬೀಳಗಿ<br>ಕೆಎಫ್‌ಸಿಎಸ್‌ಸಿ ಬೀಳಗಿ | ಕೆಎಫ್‌ಸಿಎಸ್‌ಸಿ ಬೀಳಗಿ |



ಉಪ ನಿರ್ದೇಶಕರು,
ಆ.ನಾ.ಸ.ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟೆ

5. ಜಿಲ್ಲಾ ಇಲಾಖಾ ವ್ಯಾಪ್ತಿಯಲ್ಲಿ ಬರುವ ಸಗಟು ಸೀಮೆಎಣ್ಣೆ ಮಳಿಗೆಗಳ ವಿವರ.

| ಕ್ರ.ಸಂ. | ತಾಲ್ಲೂಕು | ಸಗಟು ಸೀಮೆಎಣ್ಣೆ ಮಳಿಗೆಗಳ ಹೆಸರು | ಕಂಪನಿ |
|---|---|---|---|
| 1 | ಬಾಗಲಕೋಟೆ | ಮೆ:ಬಿ.ಜಿ.ಹೆಸ್ಸೆ ಬಾಗಲಕೋಟೆ<br>ಶ್ರೀಮತಿ.ಆರ್.ಎ. ಗಂಜಿಹಾಳ, ಬಾಗಲಕೋಟೆ<br>ಮೆ:ಸುರೇಶ ನಿಡಗುಂದಿ ಬಾಗಲಕೋಟೆ | ಐಓಸಿ<br>ಬಿಪಿಸಿ<br>ಐಓಸಿ |
| 2 | ಬದಾಮಿ | ಮೆ:ಹೆಸ್ಸೆ & ಕಂ. ಬದಾಮಿ | ಐಓಸಿ |
| 3 | ಹುನಗುಂದ | ಮೆ:ಪಿ.ವ್ಹಿ.ಬಿಜ್ಜಳ, ಹುನಗುಂದ | ಐಓಸಿ |
| 4 | ಜಮಖಂಡಿ | ಮೆ:ಜಿ.ಬಿ.ಮುರಗೋಡ, ಜಮಖಂಡಿ<br>ಮೆ:ಬಿ.ಜಿ. ಹೊಸಕೋಟಿ ರಬಕವಿ (ಬ್ರ್ಯಾಂಚ್) | ಐಓಸಿ<br>ಐಓಸಿ |
| 5 | ಮುಧೋಳ | ಮೆ:ಉಮೇಶ ಮುರಗೋಡ, ಮುಧೋಳ<br>ಮೆ:ಬಿ.ಜಿ. ಹೊಸಕೋಟಿ, ಮಹಾಲಿಂಗಪೂರ ತಾ:ಮುಧೋಳ | ಐಓಸಿ<br>ಐಓಸಿ |
| 6 | ಬೀಳಗಿ | ಮೆ:ಎಸ್.ಎಲ್.ಪಾಟೀಲ, ಬೀಳಗಿ | ಐಓಸಿ |

6. ಜಿಲ್ಲಾ ಇಲಾಖಾ ವ್ಯಾಪ್ತಿಯಲ್ಲಿ ಬರುವ ನ್ಯಾಯಬೆಲೆ ಅಂಗಡಿ / ಚಿಲ್ಲರೆ ಸೀಮೆಎಣ್ಣೆ/ಎಲ್‌ಪಿಜಿ/ ಪೆಟ್ರೋಲ್ ಬಂಕ್ ಪ್ರಾಧಿಕಾರಗಳ ವಿವರ.

| ಅ. ನಂ | ತಾಲೂಕು | ನ್ಯಾಯಬೆಲೆ ಅಂಗಡಿಗಳ ಸಂಖ್ಯೆ | ಸೀಮೆಎಣ್ಣೆ ವಿತರಕರ ವಿವರ | | | ಎಲ್‌ಪಿಜಿ ವಿಕರಕರ ಸಂಖ್ಯೆ | ಪೆಟ್ರೋಲ್ ಬಂಕ್‌ಗಳ ಸಂಖ್ಯೆ |
|---|---|---|---|---|---|---|---|
| | | | ಸೀಮೆಎಣ್ಣೆ ಮಾತ್ರ ವಿತರಿಸುವವರು | ನ್ಯಾ.ಬೆ.ಅಂಗಡಿಯಲ್ಲಿ ಸೀಮೆಎಣ್ಣೆ ವಿತರಿಸುತ್ತಿರುವವರು | ಒಟ್ಟು ಸೀಮೆಎಣ್ಣೆ ವಿತರಕರು | | |
| 1 | ಬಾಗಲಕೋಟೆ | 116 | 0 | 116 | 116 | 7 | 29 |
| 2 | ಬದಾಮಿ | 159 | 0 | 159 | 159 | 3 | 19 |
| 3 | ಹುನಗುಂದ | 120 | 0 | 120 | 120 | 3 | 24 |
| 4 | ಜಮಖಂಡಿ | 132 | 0 | 132 | 132 | 7 | 37 |
| 5 | ಮುಧೋಳ | 104 | 0 | 104 | 104 | 3 | 45 |
| 6 | ಬೀಳಗಿ | 60 | 0 | 60 | 60 | 2 | 11 |
| | ಒಟ್ಟು | **691** | **0** | **691** | **691** | **25** | **165** |

ಉಪ ನಿರ್ದೇಶಕರು,
ಆ.ನಾ.ಸ. ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟೆ

7. ಬಾಗಲಕೋಟೆ ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ವಿವಿಧ ವರ್ಗಗಳ ಪಡಿತರ ಚೀಟಿಗಳ ವಿವರ (31-03-2019ಕ್ಕೆ ಇದ್ದಂತೆ)

| ಕ್ರ ಸಂ | ತಾಲ್ಲೂಕು | ಪಡಿತರ ಚೀಟಿಗಳ ವಿವರ | | | |
|---|---|---|---|---|---|
| | | ಅಂ.ಅ.ಯೋ (ಎಎವೈ) | ಅಕ್ಷಯ (ಬಿಪಿಎಲ್) | ಎ.ಪಿ.ಎಲ್. | ಒಟ್ಟು ಪಡಿತರ ಚೀಟಿಗಳು |
| ಪಡಿತರ /ಪಟ್ಟಣ ಪ್ರದೇಶ | | | | | |
| 1 | ಬಾಗಲಕೋಟೆ | 1253 | 17520 | 2713 | 21486 |
| 2 | ಬದಾಮಿ | 1607 | 14427 | 1393 | 17427 |
| 3 | ಹುನಗುಂದ | 1899 | 20160 | 1708 | 23767 |
| 4 | ಜಮಖಂಡಿ | 1853 | 38374 | 4525 | 44752 |
| 5 | ಮುಧೋಳ | 1957 | 21437 | 1979 | 25373 |
| 6 | ಬೀಳಗಿ | 246 | 3240 | 545 | 4031 |
| | ಒಟ್ಟು | **8815** | **115158** | **12863** | **136836** |
| ಗ್ರಾಮೀಣ ಪ್ರದೇಶ | | | | | |
| 1 | ಬಾಗಲಕೋಟೆ | 5196 | 31781 | 3944 | 40921 |
| 2 | ಬದಾಮಿ | 6687 | 46723 | 4107 | 57517 |
| 3 | ಹುನಗುಂದ | 5495 | 39439 | 3872 | 48806 |
| 4 | ಜಮಖಂಡಿ | 3429 | 59267 | 11794 | 74490 |
| 5 | ಮುಧೋಳ | 3925 | 43763 | 7697 | 55385 |
| 6 | ಬೀಳಗಿ | 3258 | 26461 | 6006 | 35725 |
| | ಒಟ್ಟು | **27990** | **247434** | **37420** | **312844** |
| ಒಟ್ಟು | | | | | |
| 1 | ಬಾಗಲಕೋಟೆ | 6449 | 49301 | 6657 | 62407 |
| 2 | ಬದಾಮಿ | 8294 | 61150 | 5500 | 74944 |
| 3 | ಹುನಗುಂದ | 7394 | 59599 | 5580 | 72573 |
| 4 | ಜಮಖಂಡಿ | 5282 | 97641 | 16319 | 119242 |
| 5 | ಮುಧೋಳ | 5882 | 65200 | 9676 | 80758 |
| 6 | ಬೀಳಗಿ | 3504 | 29701 | 6551 | 39756 |
| | ಒಟ್ಟು | **36805** | **362592** | **50283** | **449680** |

ಉಪ ನಿರ್ದೇಶಕರು,
ಆ.ನಾ.ಸ ಗ್ರಾ.ವ್ಯ.ಇಲಾಖೆ,
ಬಾಗಲಕೋಟೆ

## ಇಲಾಖೆಯ ಪ್ರಕಾರ್ಯಗಳು ಹಾಗೂ ಕರ್ತವ್ಯಗಳ ವಿವರ

### 1) ಸಾರ್ವಜನಿಕ ವಿತರಣಾ ಪದ್ಧತಿ :-

ಕರ್ನಾಟಕ ರಾಜ್ಯದಲ್ಲಿ ನಿರ್ಧಿಷ್ಟ ಗುರಿಯುಳ್ಳ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಪಡಿತರ ವಿತರಣಾ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಈ ಯೋಜನೆಯನ್ವಯ ಮನೆ-ಮನೆ ಸಮೀಕ್ಷೆ ನಡೆಸಿ ಗುರುತಿಸಲ್ಪಟ್ಟ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಪಡಿತರ ವಸ್ತುಗಳ ವಿತರಣೆಯನ್ನು ಹಾಗೂ ಇತರೆ ಎಲ್ಲಾ ಕುಟುಂಬಗಳಿಗೆ ಆಹಾರಭದ್ರತೆಯನ್ನು ಒದಗಿಸಲು ಇಲಾಖೆಯು ಕಾರ್ಯನಿರ್ವಹಿಸುತ್ತದೆ.

ಇಲಾಖೆಯಿಂದ ಪರವಾನಿಗೆ ಪಡೆದ ನ್ಯಾಯಬೆಲೆ ಅಂಗಡಿಗಳು ಫಲಾನುಭವಿಗಳಿಗೆ ಪಡಿತರ ವಸ್ತುಗಳನ್ನು ವಿತರಿಸುವ ಮುಖ್ಯವಾಹಿನಿಗಳಾಗಿದ್ದು, ನಿಗಧಿತ ದರ ಹಾಗೂ ಪ್ರಮಾಣದಲ್ಲಿ ವಿತರಣಾ ಕಾರ್ಯ ಮಾಡುವುದು. ಈ ಎಲ್ಲಾ ವಿತರಣಾ ವ್ಯವಸ್ಥೆಯನ್ನು ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016, ತಿದ್ದುಪಡಿ ಆದೇಶ-2017 ಹಾಗೂ 2018 ರಡಿ ನಿಯಂತ್ರಿಸಲಾಗುತ್ತಿದೆ.

### 2) ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತವೆ.:-

**ಪಡಿತರ ಆಹಾರಧಾನ್ಯ ಪೂರೈಕೆ ಪದ್ಧತಿ**

**ಪಡಿತರ ಚೀಟಿ ವ್ಯವಸ್ಥೆ**

ಪ್ರತಿ ಕುಟುಂಬಗಳಿಗೆ ಕುಟುಂಬದ ವಾರ್ಷಿಕ ವರಮಾನವನ್ನು ಪರಿಗಣನೆಗೆ ತೆಗೆದುಕೊಂಡು ಪಡಿತರ ಚೀಟಿ ನೀಡಲು ಸರ್ಕಾರ ಮಾನದಂಡಗಳನ್ನು ನಿಗಧಿಪಡಿಸಿದೆ. ಜಿಲ್ಲೆಯಲ್ಲಿ ಪ್ರಸ್ತುತ 3 ರೀತಿಯ ಪಡಿತರ ಚೀಟಿಗಳನ್ನು ವಿತರಣೆ ಮಾಡಲಾಗುತ್ತಿದೆ.

1) ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ಬಿಪಿಎಲ್/ಆದ್ಯತಾ (ಪಿಹೆಚ್‌ಹೆಚ್) ಪಡಿತರ ಚೀಟಿ (ರಾಜ್ಯ ಸರ್ಕಾರದ ಯೋಜನೆ)
2) ಬಡವರಲ್ಲಿ ಕಡು ಬಡವರಿಗೆ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ (ಕೇಂದ್ರ ಸರ್ಕಾರದ ಯೋಜನೆ)
3) ಬಡತನ ರೇಖೆಯ ಮೇಲಿನ ಕುಟುಂಬಗಳಿಗೆ ಎಪಿಎಲ್ ಪಡಿತರ ಚೀಟಿ

ಉಪ ನಿರ್ದೇಶಕರು,
ಆ.ನಾ.ಸ.ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟೆ

3) ಬಿಪಿಎಲ್ ಪಡಿತರ ಚೀಟಿಗೆ ಸರ್ಕಾರವು ನಿಗಧಿಪಡಿಸಿರುವ ಮಾನದಂಡಗಳು.

ಸರ್ಕಾರದ ಆದೇಶ ಸಂಖ್ಯೆ :ಆನಾಸ:116 ಡಿಆರ್ಎ 2015, ಬೆಂಗಳೂರ ದಿನಾಂಕ: 25-03-2017 ರನ್ವಯ ಬಡತನ ಕೆಳಗಿನ ಕುಟುಂಬಗಳನ್ನು ಗುರುತಿಸಲು ಈ ಕೆಳಗೆ ತಿಳಿಸಿದ ಮಾನದಂಡಗಳನ್ನು ನಿಗಧಿಪಡಿಸಿದೆ. ವಿವರ ಈ ಕೆಳಗಿನಂತಿವೆ.

ಆರ್ಥಿಕವಾಗಿ ಸದೃಢ ಕುಟುಂಬಗಳನ್ನು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಗುರುತಿಸತಕ್ಕದ್ದು.

1) ವೇತನವನ್ನು ಗಣನೆಗೆ ತೆಗೆದುಕೊಳ್ಳದೇ ಎಲ್ಲ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ, ಒಳಗೊಂಡಂತೆ ಆದಾಯ ತೆರಿಗೆ/ಸೇವಾ ತೆರಿಗೆ/ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲ ಕುಟುಂಬಗಳು.
2) ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ, ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.
3) ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರ್ಯಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬಗಳನ್ನು ಹೊರತುಪಡಿಸಿ 4 ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲ ಕುಟುಂಬಗಳು.
4) ಕುಟುಂಬದ ವಾರ್ಷಿಕ ಆದಾಯವು ರೂ.1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.

ಮೇಲೆ ತಿಳಿಸಿರುವಂತೆ ಗುರುತಿಸಲಾದ ಆದ್ಯತೇತರ(ಎಪಿಎಲ್) ಕುಟುಂಬಗಳನ್ನು ಹೊರತುಪಡಿಸಿ ಉಳಿದ ಕುಟುಂಬಗಳು ಆದ್ಯತಾ(ಬಿಪಿಎಲ್) ಪಡಿತರ ಚೀಟಿಯನ್ನು ಪಡೆಯಲು ಅರ್ಹ ಕುಟುಂಬವೆಂದು ಪರಿಗಣಿಸತಕ್ಕದ್ದು.

ಪಡಿತರ ಚೀಟಿ ಪಡೆಯಲು ಒದಗಿಸಬೇಕಾದ ದಾಖಲೆಗಳು.

ಜಿಲ್ಲೆಯಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಕುಟುಂಬವು ಅವರಿಗೆ ಅರ್ಹತೆ ಹೊಂದಿರುವ ಪಡಿತರ ಚೀಟಿಯನ್ನು ಪಡೆಯಲು ಹಕ್ಕು ಉಳ್ಳವರಾಗಿರುತ್ತಾರೆ. ಅರ್ಜಿದಾರರು ಬಯೋಮೆಟ್ರಿಕ್ ಹೊಂದಿರುವ ಯಾವುದೇ ಪಡಿತರ/ಪಟ್ಟಣ ಪ್ರದೇಶದ ಸೇವಾ ಕೇಂದ್ರಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಕ್ಕೆ ಸಂಬಂಧಿಸಿದಂತೆ ಆಯಾ ಗ್ರಾಮ ಪಂಚಾಯತಿಗಳಲ್ಲಿ ಆನ್‌ಲೈನ್ ಮೂಲಕ ಆಧಾರ ಆಧಾರಿತ ಬಯೋ ನೀಡಿ ಅರ್ಜಿ ಸಲ್ಲಿಸಬೇಕು. ಸಂಬಂಧಿಸಿದ ಆಹಾರ ನಿರೀಕ್ಷಕರು ಸದರಿ ಅರ್ಜಿಯನ್ನು ಸ್ಥಳ ತನಿಖೆ ಮಾಡಿ ಇಲಾಖಾ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವುದು ನಂತರ ಮನಿಪಾಲ್‌ದಿಂದ ಪಡಿತರ ಚೀಟಿ ಮುದ್ರಣವಾಗಿ ಸ್ಪೀಡ್ ಪೋಸ್ಟ್ ಮುಖಾಂತರ ನೇರವಾಗಿ ಅರ್ಜಿದಾರರ ಮನೆಗೆ ತಲುಪುತ್ತದೆ.



ಉಪ ನಿರ್ದೇಶಕರು,
ಆ.ನಾ.ಸ.ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟ

## 5) ಪಡಿತರ ವ್ಯವಸ್ಥೆ:- 'ಅನ್ನಭಾಗ್ಯ ಯೋಜನೆ'

**"ಹಸಿವು ಮುಕ್ತ ಕರ್ನಾಟಕ"** ನಿರ್ಮಿಸುವ ಗುರಿ ಹೊಂದಿರುವ ರಾಜ್ಯ ಸರಕಾರವು ಮಹಾತ್ವಾಕಾಂಕ್ಷೆಯ **'ಅನ್ನಭಾಗ್ಯ ಯೋಜನೆ'**ಯನ್ನು 2013ನೇ ಜುಲೈ 10 ರಂದು ಜಾರಿಗೆ ತಂದಿದೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಈ ಯೋಜನೆಯನ್ವಯ ಪ್ರತಿ ತಿಂಗಳು ಬಿಪಿಎಲ್ ಪಡಿತರ ಚೀಟಿಯ ಪ್ರತಿ ಸದಸ್ಯನಿಗೆ 7 ಕೆ.ಜಿ. ಅಕ್ಕಿ ಮತ್ತು ಅಂತ್ಯೋದಯ ಅನ್ನಯೋಜನೆ ಪ್ರತಿ ಪಡಿತರ ಚೀಟಿಗೆ 35 ಕೆ.ಜಿ. ಅಕ್ಕಿ ಉಚಿತವಾಗಿ ಮತ್ತು ಎಎವೈ ಹಾಗೂ ಬಿಪಿಎಲ್ ಪಡಿತರ ಚೀಟಿಗೆ 1 ಕೆ.ಜಿ ತೊಗರಿಬೇಳೆಯನ್ನು ಸಹಾಯಧನಯುಕ್ತ ದರ ರೂ.38/- ರಂತೆ ವಿತರಿಸಲಾಗುತ್ತಿದೆ ಹಾಗೂ ಸೇವಾ ಕೇಂದ್ರ ಹಾಗೂ ಗ್ರಾಮ ಪಂಚಾಯತ್‌ಗಳಲ್ಲಿ ಒಪ್ಪಿಗೆ ನೀಡಿರುವ ಎಪಿಎಲ್ ಪಡಿತರ ಚೀಟಿಯ ಏಕಸದಸ್ಯ ಕುಟುಂಬಕ್ಕೆ 5 ಕೆ.ಜಿ. ಹಾಗೂ ಒಂದಕ್ಕಿಂತ ಹೆಚ್ಚು ಸದಸ್ಯರಿರುವ ಕುಟುಂಬಕ್ಕೆ 10 ಕೆ.ಜಿ. ಅಕ್ಕಿಯನ್ನು ಪ್ರತಿ ಕೆ.ಜಿ. ಗೆ ರೂ.15/- ರಂತೆ ವಿತರಿಸಲಾಗುತ್ತಿದೆ. ಅದಲ್ಲದೇ ಗ್ರಾಮೀಣ ಪ್ರದೇಶದ ಅಂತ್ಯೋದಯ ಹಾಗೂ ಬಿಪಿಎಲ್ ಅನಿಲರಹಿತ ಪಡಿತರ ಚೀಟಿದಾರರಿಗೆ ತಲಾ 3 ಲೀ. ದಂತೆ ಮತ್ತು ಒಪ್ಪಿಗೆ ನೀಡಿರುವ ಅನಿಲ ಪಡಿತರ ಚೀಟಿದಾರರಿಗೆ 1 ಲೀ. ರೂ.35/- ರಂತೆ ವಿತರಿಸಲಾಗುತ್ತಿದೆ.

### ಆಹಾರ ಭದ್ರತಾ ಕಾಯ್ದೆ-2013

ಕೇಂದ್ರ ಸರ್ಕಾರವು ಆಹಾರ ಭದ್ರತಾ ಕಾಯ್ದೆ-2013"ನ್ನು ರಾಜ್ಯದಲ್ಲಿ 2014ನೇ ಜನೇವರಿ ಮಾಹೆಯಿಂದ ಅನುಷ್ಠಾನಗೊಳಿಸಿದೆ. ಅರ್ಹ ಫಲಾನುಭವಿಗಳು ತನ್ನ ಹಕ್ಕಿನ ಆಹಾರಧಾನ್ಯವನ್ನು ಪ್ರತಿ ತಿಂಗಳು ಪಡೆಯಲು ಈ ಕಾಯ್ದೆಯು ಭದ್ರತೆಯನ್ನು ಒದಗಿಸಿದೆ.

### ಪಡಿತರ ಖಾತ್ರಿ ಯೋಜನೆ:

ಪಡಿತರ ಚೀಟಿದಾರರು ತಮ್ಮ ಹಕ್ಕಿನ ಪಡಿತರವನ್ನು ಪ್ರತಿ ತಿಂಗಳ ಆರಂಭಿಕ ದಿನದಿಂದ ತಿಂಗಳ ಅಂತ್ಯದ ದಿನದ ವರೆಗೆ ಬೆಳಿಗ್ಗೆ 7-00 ರಿಂದ 12 ಗಂಟೆ ಹಾಗೂ ಸಂಜೆ 4-00 ರಿಂದ ರಾತ್ರಿ 8-00 ರ ಅವಧಿಯಲ್ಲಿ (ರಾಷ್ಟ್ರೀಯ ದಿನ ಹಾಗೂ ಪ್ರತಿ ಮಂಗಳವಾರ ರಜೆ ದಿನ ಹೊರತುಪಡಿಸಿ) ಲಭ್ಯವಾಗಿಸುವ ಖಾತ್ರಿ ಯೋಜನೆಯಾಗಿದೆ.

### ಆಹಾರ ಅದಾಲತ್:

ಪಡಿತರ ಚೀಟಿದಾರರ ಅಹವಾಲು ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಲೋಪದೋಷವನ್ನು ಪಾರದರ್ಶಕವಾಗಿ ಪರಿಶೀಲನೆ ಮಾಡಿ ಕ್ರಮಕೈಕೊಳ್ಳಲು ಪ್ರತಿ ತಿಂಗಳು 7ನೇ ತಾರೀಖಿನಂದು ನಿಯೋಜಿತ ನೋಡಲ್ ಅಧಿಕಾರಿ ಹಾಗೂ ನ್ಯಾಯಬೆಲೆ ಅಂಗಡಿ ಹಂತದ ಜಾಗೃತ ಸಮಿತಿ ಸದಸ್ಯರು ಸೇರಿ ನಡೆಸುವ ಅದಾಲತ್‌ವಾಗಿದೆ.

ಉಪ ನಿರ್ದೇಶಕರು,
ಆ.ನಾ.ಸ.ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟ

ಜಾಗೃತ ಸಮಿತಿ:

ಜಿಲ್ಲಾ, ತಾಲೂಕಾ ಹಾಗೂ ನ್ಯಾಯಬೆಲೆ ಅಂಗಡಿ ಹಂತದ ಜಾಗೃತ ಸಮಿತಿಯನ್ನು ರಚಿಸಲಾಗಿದ್ದು, ಇವುಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಲೋಪದೋಷಗಳನ್ನು ಸರಿಪಡಿಸಲು ಶಾಸನಬದ್ಧ ಸಮಿತಿಗಳಾಗಿ ಕಾರ್ಯನಿರ್ವಹಿಸುತ್ತಿವೆ.

ದಾಸೋಹ ಯೋಜನೆ:

"ದಾಸೋಹ ಯೋಜನೆ"ಯಡಿ ಕಲ್ಯಾಣ ಸಂಸ್ಥೆಗಳಾದ ನಾರಿನಿಕೇತನ, ವೃದ್ಧಾಶ್ರಮ, ಅಂಧ ಮಕ್ಕಳ ಶಾಲೆ, ಬಡ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ, ಭಿಕ್ಷುಕರ ಪುನರ್‌ವಸತಿ ಕೇಂದ್ರ ಮುಂತಾದವುಗಳಿಗೆ ಅನ್ನಭಾಗ್ಯ ಯೋಜನೆಯ ಮಾದರಿಯಲ್ಲಿಯೇ ಉಚಿತವಾಗಿ ಆಹಾರಧಾನ್ಯ ನೀಡಲಾಗುವುದು. ಜಿಲ್ಲೆಯಲ್ಲಿ 18 ಕಲ್ಯಾಣ ಸಂಸ್ಥೆಗಳನ್ನು ಗುರುತಿಸಲಾಗಿದೆ.

6) ಪಡಿತರ ಖಾತರಿ ನ್ಯಾಯಬೆಲೆ ಅಂಗಡಿ ಸ್ವರೂಪ:-

ಕರ್ನಾಟಕ ಅಗತ್ಯ ವಸ್ತುಗಳ ಸಾರ್ವಜನಿಕ ವಿತರಣಾ ಪದ್ಧತಿ (ನಿಯಂತ್ರಣ) ಆದೇಶ 2016 ರಡಿಯಲ್ಲಿ ಪಡಿತರ ಚೀಟಿದಾರರಿಗೆ ಆಹಾರಧಾನ್ಯ ವಿತರಿಸಲು ನ್ಯಾಯಬೆಲೆ ಅಂಗಡಿ ಮಂಜೂರು ಮಾಡಿ ಅದಕ್ಕೆ ಪಡಿತರ ಚೀಟಿಗಳನ್ನು ನಿಯೋಜಿಸಿ ಆಹಾರಧಾನ್ಯಗಳ ವಿತರಣೆಯ ಜವಾಬ್ದಾರಿ ವಹಿಸಲಾಗಿರುತ್ತದೆ. ಹೀಗಾಗಿ ಜಿಲ್ಲೆಯಲ್ಲಿ ಒಟ್ಟು 691 ನ್ಯಾಯಬೆಲೆ ಅಂಗಡಿಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಕನಿಷ್ಟ 500 ಬಿಪಿಎಲ್ ಕಾರ್ಡುಗಳಿಗೆ, ಪಟ್ಟಣ ಹಾಗೂ ನಗರ ಪ್ರದೇಶಗಳಿಗೆ 800 ಬಿಪಿಎಲ್ ಕಾರ್ಡುಗಳಿಗೆ ಒಂದು ನ್ಯಾಯಬೆಲೆ ಅಂಗಡಿಯಂತೆ ಮಂಜೂರ ಮಾಡಿ ಪ್ರಾಧಿಕಾರ ಪತ್ರ ನೀಡಲಾಗುತ್ತಿದೆ. ಸದರಿ ನ್ಯಾಯಬೆಲೆ ಅಂಗಡಿಕಾರರು ಬೆಳಿಗ್ಗೆ 7-00 ಗಂಟೆಯಿಂದ ಮಧ್ಯಾಹ್ನ 12-00 ಗಂಟೆಯವರೆಗೆ ಮತ್ತು ಮಧ್ಯಾಹ್ನ 4-00 ಗಂಟೆಯಿಂದ ರಾತ್ರಿ 8-00 ರವರೆಗೆ (ರಾಷ್ಟ್ರೀಯ ರಜಾದಿನ ಹೊರತುಪಡಿಸಿ) ರಿಯಾಯತಿ ದರದಲ್ಲಿ ಆಹಾರಧಾನ್ಯ ಹಾಗೂ ಸೀಮೆಎಣ್ಣೆ ವಿತರಣೆ ಮಾಡುತ್ತಿರುವರು. ಮತ್ತು ಸದರಿ ನ್ಯಾಯಬೆಲೆ ಅಂಗಡಿ ಮುಂದೆ ಪಡಿತರ ಚೀಟಿದಾರರಿಗೆ ತಿಳಿಯುವಂತೆ ದರ ದಾಸ್ತಾನು ಪ್ರಮಾಣ ಫಲಕಗಳನ್ನು ಪ್ರದರ್ಶಿಸುವರು. ಒಟ್ಟಾರೆ ನ್ಯಾಯಬೆಲೆ ಅಂಗಡಿ ಸರ್ಕಾರ ಹಾಗೂ ಪಡಿತರ ಚೀಟಿದಾರರ ಮಧ್ಯ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ.

ಪಾಸ್(POS) ನ್ಯಾಯಬೆಲೆ ಅಂಗಡಿ:

ಜಿಲ್ಲೆಯ 691 ನ್ಯಾಯಬೆಲೆ ಅಂಗಡಿಗಳ ಪೈಕಿ 688 ನ್ಯಾಯಬೆಲೆ ಅಂಗಡಿಗಳಲ್ಲಿ ಪಾಸ್ ಅಳವಡಿಸಲಾಗಿದೆ. ಪಡಿತರ ಚೀಟಿದಾರರು ಆಧಾರ ಆಧಾರಿತ ಬಯೋ ದೃಢಿಕರಣ ನೀಡಿ ಪಡಿತರ ವಸ್ತುಗಳನ್ನು ಪಡೆಯಲು ಅವಕಾಶ ಕಲ್ಪಿಸಲಾಗಿರುತ್ತದೆ. ಉಳಿದ ನ್ಯಾಯಬೆಲೆ ಅಂಗಡಿಕಾರರು ತಮ್ಮ ನೋಂದಾಯಿತ ಮೊಬೈಲ್ ಮೂಲಕ ಐವಿಆರ್‌ಎಸ್ ಮಾಡಿ ಪಡಿತರ ಚೀಟಿದಾರರ ಮಾಹಿತಿಯನ್ನು ಇಲಾಖಾ ವೆಬ್‌ಸೈಟ್‌ಗೆ ರವಾನಿಸುವರು.

ಉಪ ನಿರ್ದೇಶಕರು,
ಆ.ನಾ.ಸ.ಹಾಗೂ ಗ್ರಾ.ವ್ಯ.ಇಲಾಖೆ,
ಬಾಗಲಕೋಟ